**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1145/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಸಿದ್ದರಾಜು** | ಪ್ರಾಸಾಃ 4 |
| ತಂದೆಯ/ಗಂಡನ ಹೆಸರು | | ದಾಸಯ್ಯ | ಚಾಸಾಃ 5 |
| ವಯಸ್ಸು | | 44 ವರ್ಷ | |
| ಕೆಲಸ | | ಡ್ರೈವರ್, ಬಣ್ಣಾರಿ ಅಮ್ಮನ್ ಶುಗರ್ ಫ್ಯಾಕ್ಟರಿ ನಂಜನಗೂಡು | ಸಾ ಪ್ರ ಬೋ |
| ವಾಸ | | ನಂಜನಗೂಡು | ದಿಃ 12/09/2023 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಆರೋಪಿತರು ಗೊತ್ತಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಮತ್ತು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿತರು ಅಕ್ರಮ ಕೂಟ ಕಟ್ಟಿಕೊಂಡು ಚಾಸಾ-1 ರಿಂದ 4 ರವರನ್ನು ಅಕ್ರಮವಾಗಿ ತಡೆದು ಅವರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ. ಆರೋಪಿತರುಗಳು ಜಗಳಕ್ಕೆ ಕುಮ್ಮಕ್ಕು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ದಿನಾಂಕ 27.06.2014 ಮಧ್ಯಾಹ್ನ 2.15 ಗಂಟೆಗೆ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಮುಖ್ಯ ದ್ವಾರದ ಗೇಟಿನ ಬಳಿ ಚಾಸಾ-1 ಸರ್ಕಾರಿ ಕರ್ತವ್ಯ ನಿರ್ವಹಿಸಲು ಹೋಗುತ್ತಿದ್ದಾಗ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಚಾಸಾ-1 ರವರನ್ನು ತಡೆದು ಅವರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. 8 ರಿಂದ 29 ನೇ ಆರೋಪಿತರು ಉಳಿದ ಆರೋಪಿತರಿಗೆ ಅಪರಾಧಕ್ಕೆ ಕುಮ್ಮಕ್ಕು ನೀಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು ನನಗೆ ಗೊತ್ತಿದ್ದರು ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದೇ ವಿಚಾರವಾಗಿ ದಿನಾಂಕ 28.06.2014 ರಂದು ಈಗ ನನಗೆ ಓದಿ ಹೇಳಿದಂತೆ " ದಿನಾಂಕ 27.06.2014 ರಂದು -------- ನನಗೆ ತಿಳಿದಿರುತ್ತದೆ" ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ

ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ಈ ಮೇಲಿನ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**